## ಸಿಪಿಸಿಆರ್‌ಐಯಲ್ಲಿ ಫಸಲ್ ಬಿಮಾ ಯೋಜನೆ ಮಾಹಿತಿ ಶಿಬಿರ | ಸಾಂಸದರಿಂದ ಉದ್ಘಾಟನೆ

# ಬೆಳೆ ಕುಸಿತದಿಂದ ಕೃಷಿಕರ ರಕ್ಷಣೆಗೂ ನೆರವಾಗಲಿ

4/6/16




ಕಾಸರಗೋಡು ಲೋಕಸಭಾ ಸದಸ್ಯ ಪಿ.ಕರುಣಾಕರನ್ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು.

**ಕುಂಬಳೆ:** ಕಾಸರಗೋಡು ಕೃಷಿ ವಿಜ್ಞಾನ ಹಾಗೂ ಸಂಶೋಧನಾ ಕೇಂದ್ರವಾದ ಸಿಪಿಸಿಆರ್‌ಐಯಲ್ಲಿ ಜಿಲ್ಲೆಯ ಕೃಷಿಕರ ಅನುಕೂಲಕ್ಕಾಗಿ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯ ಬಗ್ಗೆ ಜಾಗೃತಿ ಕಾರ್ಯಕ್ರಮವು ಇತ್ತೀಚೆಗೆ ಜರಗಿತು.

ಕಾರ್ಯಕ್ರಮವನ್ನು ಕಾಸರಗೋಡು ಲೋಕಸಭಾ ಸದಸ್ಯ ಪಿ.ಕರುಣಾಕರನ್ ಉದ್ಘಾಟಿಸಿದರು. ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯು ಹವಾಮಾನ ಬದಲಾವಣೆ ಹಾಗೂ ನಂತರದ ದುರಂತಗಳ ಕಾರಣದಿಂದ ಸಮಸ್ಯೆಗಳನ್ನು ಎದುರಿಸುವ ಕೃಷಿಕರಿಗೆ ಪ್ರಯೋಜನಕಾರಿಯಾಗಿದೆ ಎಂದು ಸಾಂಸದರು ನುಡಿದರು. ಈ ಬೆಳೆ ವಿಮೆಯು ಉತ್ಪನ್ನಗಳ ಬೆಲೆ ಕುಸಿತದಿಂದ ರೈತರನ್ನು ರಕ್ಷಿಸುವ ನಿಟ್ಟಿನಲ್ಲೂ ಪ್ರಯೋಜನಕಾರಿಯಾಗಬೇಕು ಎಂದು ಅವರು ಆಶಿಸಿದರು.

ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು ಸಮಾರಂಭದ ಅಧ್ಯಕ್ಷತೆ ವಹಿಸಿ, ಅನೇಕ ಸರಕಾರಿ ಯೋಜನೆಗಳು ಸರಿಯಾದ ದೃಷ್ಟಿಕೋನವಿಲ್ಲದೆ ಸಾಮಾನ್ಯ ಕೃಷಿಕರಿಗೆ ತಲುಪುವುದಿಲ್ಲ, ಇಂತಹ ಕಾರ್ಯಾಗಾರಗಳು ಕೃಷಿಕರಿಗೆ ಪಿಎಂಎಫ್‌ಬಿವೈ ಬಗ್ಗೆ ಮನವರಿಗೆ ಮಾಡಿಕೊಡುತ್ತವೆ. ಇದರಿಂದಾಗಿ ಕೃಷಿಯಲ್ಲಿ ತೊಡಗಿಸಿಕೊಂಡವರಿಗೆ ಬಹಳಷ್ಟು ಪ್ರಯೋಜನವಾಗಲಿದೆ ಎಂದು ಹೇಳಿದರು.

ಸಿಪಿಸಿಆರ್‌ಐ ನಿರ್ದೇಶಕ ಡಾ.ಪಿ.ಚೌಡಪ್ಪ ಪ್ರಾಸ್ತಾವಿಕ ಭಾಷಣ ಮಾಡಿ, ರೈತರಿಗೆ ಪಿಎಂಎಫ್ ಬಿವೈ ಯೋಜನೆಯಿಂದ ಲಭಿಸುವ ಲಾಭ ಹಾಗೂ ಬರ, ಪ್ರವಾಹ, ಕೀಟ ಹಾನಿ, ನೈಸರ್ಗಿಕ ವಿಕೋಪಗಳಿಂದ ಬೆಳೆ ನಷ್ಟ ಹೊಂದುವವರಿಗೆ ಹೇಗೆ ಉಪಕಾರಿಯಾಗಿದೆ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಮೊಗ್ರಾಲ್ ಪುತ್ತೂರು ಗ್ರಾಮ ಪಂಚಾಯತ್ ಅಧ್ಯಕ್ಷ ಎ.ಎ.ಜಲೀಲ್, ಎಸ್‌ಬಿಐ ಆರ್‌ಬಿಓ ಜನಾರ್ದನನ್, ವೀಣಾರಾಣಿ ಹಾಗೂ ನಬಾರ್ಡ್ ಎಜಿಎಂ ಜ್ಯೋತಿಷ್ ಜಗನ್ನಾಥ್ ಮುಂತಾದವರು ಉಪಸ್ಥಿತರಿದ್ದರು.

ಡಾ.ಟಿ.ಎಸ್.ಮನೋಜ್‌ಕುಮಾರ್ ಸ್ವಾಗತಿಸಿ, ವಂದಿಸಿದರು. ಕಾರ್ಯಕ್ರಮದ ಬಳಿಕ ಪಿಎಂಎಫ್ ಬಿವೈಯ ಕುರಿತು ಕೆ.ಪಿ.ಜನಾರ್ದನನ್, ಸಿ.ವಿ. ವಿಮಲ್, ವೀಣಾರಾಣಿ, ಗೋಪು ಮೆನೋನ್, ಪ್ರಮೋದ್ ಥೋಮಸ್ ಮೊದಲಾದವರು ಕೃಷಿಕರಿಗೆ ಮಾಹಿತಿ ಒದಗಿಸಿದರು. ನೂರಾರು ಮಂದಿ ಕೃಷಿಕರು ಯೋಜನೆಯ ಬಗ್ಗೆ ಪ್ರಶ್ನೆಗಳನ್ನು ಕೇಳಿ ತಜ್ಞರಿಂದ ವಿವರಣೆ ಪಡೆದುಕೊಂಡರು.